ನೋಡಿಯೇ ಬಿಡೋಣ ಅಂತ ಪ್ರತಿಭಾ ಕಾರಂಜಿಯ ಜಜ್ಜುವಿಕೆಗೆ ಹೋದೆ. ಬೆಳಗ್ಗಿಂದ ಸಂಜೆಯ ವರೆಗೆ ವಿಧವಿಧದ ಸ್ಪರ್ಧೆಗಳು ನಡೆದವು. ನಡುವೆ ವಿರಾಮದಲ್ಲಿ ನಾನೂ ಸೇರಿದಂತೆ ಇತರ ಜಜ್ಜುಗಳು ಆ ಕಡೆ ಈ ಕಡೆ ಹೋಗುವಾಗ ಸ್ಪರ್ಧಿಸುತ್ತಿದ್ದ ಮಕ್ಕಳ ಪೋಷಕರು, ಆ ಮಕ್ಕಳ ಶಾಲೆಯ ಟೀಚರುಗಳು ನಮ್ಮನ್ನು ಕಂಡು ಅತೀ ವಿನಯದಿಂದ ನಮಸ್ಕರಿಸುವುದು, ನಗುವುದು ಎಲ್ಲ ಮಾಡುತ್ತಿದ್ದರು. ಎಲ್ಲ ಮುಗಿದು ಬಹುಮಾನ ಘೋಷಣೆ ಆದ ನಂತರ ಗುರಾಯಿಸಿ ನೋಡುವುದು, ಅವುಡುಗಚ್ಚುವುದು ಎಲ್ಲ ಮಾಡತೊಡಗಿದರು. ಒಂದಿಬ್ಬರು ಪೋಷಕರು, ಟೀಚರುಗಳು, 'ಎಂತಕ್ಕೆ ನಮ್ಮ ಮಕ್ಕಳಿಗೆ ಪ್ರೈಸ್ ಬರ್ಲಿಲ್ಲ?' ಅಂತ ಜೋರು ಮಾಡ್ಲಿಕ್ಕೆ ಸುರು ಮಾಡಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ನಾನು ಅದೇನೋ ಸಬೂಬು ಹೇಳಿ ಅಲ್ಲಿಂದ ಕಾಲು ಕಿತ್ತಿದ್ದೆ.

ಇತ್ತೀಚೆಗೆ ಮಗಳ ಮದುವೆಗೆ ಆಮಂತ್ರಣ ಪತ್ರಿಕೆ ಹಂಚಲು ಒಂದಿಷ್ಟು ಬಂಧು ಮಿತ್ರರ ಗೆಳೆಯರ ಮನೆಗಳಿಗೆ ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ನನ್ನದಾಗಿತ್ತು. ಆಮಂತ್ರಣ ಪತ್ರಿಕೆ ಕೊಡುವುದು, ಕೂಡಲೇ ಹೊರಟು ಬರುವುದು ಎಂದೆಲ್ಲ ನಾನು ನನ್ನ ಹೆಂಡತಿ ಯೋಜನೆ ಹಾಕಿಕೊಂಡಿದ್ದೆವು. ಆದರೆ ಆ ಮನೆಯವರು ಬಿಡಬೇಕಲ್ಲ? ಶೋಕೇಸಿನಲ್ಲಿ ಇರುವ ಮೆಡಲು ಟ್ರೋಫಿ ಶೀಲ್ಡು ಇವುಗಳನ್ನೆಲ್ಲ ತೋರಿಸಿ ಇವೆಲ್ಲ ನನ್ನ ಮಗನಿಗೆ ಬಂದದ್ದು ಎಂದೋ ಅಥವಾ ಮಗಳಿಗೆ ಸಿಕ್ಕಿದ್ದು ಎಂದೋ ಹೇಳಿಕೊಳ್ಳುತ್ತಿದ್ದರು. ಅದನ್ನು ಕೇಳಿಸಿಕೊಂಡ ತಪ್ಪಿಗೆ 'ನಿಮ್ಮ ಮಗ ಅಥವಾ ಮಗಳು ಬಹಳ ಪ್ರತಿಭಾವಂತ ಮಕ್ಕಳು. ಅಂಥವರನ್ನು ಪಡೆದಿರುವ ನೀವೇ ಧನ್ಯ' ಎಂದೆಲ್ಲ ಹೊಗಳುತ್ತಿದ್ದೆ. ಅಷ್ಟನ್ನು ಕೇಳಿಸಿಕೊಂಡವರ ಮುಖ ಅರಳುತ್ತಿತ್ತು. ಆದರೆ ಜೊತೆಯಲ್ಲಿದ್ದ ಹೆಂಡತಿ ಸುಮ್ಮನಿರಬೇಕಲ್ಲ?

